ಸುಮಾರು ನೂರು ವರ್ಷಗಳಷ್ಟು ಹಳೆಯದಾಗಿದ್ದು ಇವುಗಳ ದುರಸ್ತಿ ಕಾರ್ಯಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅನ್ವೇಷಣೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಲಭ್ಯವಿರುವ ಅನುದಾನದಲ್ಲಿ ಕಾಲಾನುಕ್ರಮಣಿಕೆಗೆ ಅವಶ್ಯಕವಾದ ಅಗತ್ಯ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ತರೀಕೆರೆ ತಾಲ್ಲೂಕಿನಲ್ಲಿ ಖಾಸಗೀ ದೈಹಿಕ ಶಿಕ್ಷಣ ಕಾಲೇಜು ಕುರಿತು

೯೪೫. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) – ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಎಷ್ಟು ಖಾಸಗಿ ದೈಹಿಕ ಶಿಕ್ಷಣ ಕಾಲೇಜುಗಳಿವೆ?

ಆ) ಶ್ರೀ ಜಯಪ್ರಕಾಶ್ ನಾರಾಯಣ ಸಿಪಿಇಡಿ ಕಾಲೇಜಿಗೆ ಯಾವ ವರ್ಷದಿಂದ ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

ಇ) ಈಗ ಸದರಿ ಕಾಲೇಜು ನಡೆಯುತ್ತಿದೆಯೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು).—

ಅ) ತರೀಕೆರೆ ತಾಲೂಕಿನಲ್ಲಿ ಒಂದು ಖಾಸಗಿ ಸಿಪಿಇಡಿ ಕಾಲೇಜು ಇದೆ.

ಆ) ಸರ್ಕಾರದ ಆದೇಶದ ಪ. ಸಂಖ್ಯೆ ಇಡಿ ೬೬ ಇಎಸ್‌ಡಬ್ಲ್ಯೂ ೮೮ ದಿನಾಂಕ ೨೮-೮-೮೫ ರಲ್ಲಿ ಮಂಜೂರಾಗಿರುತ್ತದೆ.

ಇ) ೧೯೮೫-೮೬ರಲ್ಲಿ ಮಂಜೂರಾಗಿದ್ದರೂ ಪ್ರಾರಂಭದಿಂದ ನಡೆಸಿಲ್ಲ, ಆದರೆ ಈ ವರ್ಷ ಪ್ರಾರಂಭಿಸಿ ಆಭ್ಯರ್ಥಿಗಳನ್ನು ಸೇರಿಸಿಕೊಂಡಿದ್ದಾರೆಂದು ತಿಳಿದು ಅವರ ಹಿತದೃಷ್ಟಿಯಿಂದ ಪರೀಕ್ಷೆಗೆ ಕೂರಲು ಅವಕಾಶ ಮಾಡಿಕೊಡಲಾಗಿದೆ.

ರಾಜ್ಯದಲ್ಲಿ ದೈಹಿಕ ಶಿಕ್ಷಣ ಕಾಲೇಜುಗಳು

೯೪೬. ಶ್ರೀ ಬಿ.ಆರ್, ನೀಲಕಂಠಪ್ಪ (ತರೀಕೆರೆ).—ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜುಗಳು ಎಷ್ಟಿವೆ? ಮತ್ತು ಖಾಸಗಿ ದೈಹಿಕ ಶಿಕ್ಷಣ ಕಾಲೇಜುಗಳು ಎಷ್ಟಿವೆ ?

ಆ) ೧೯೮೬-೮೭ನೇ ಮತ್ತು ೧೯೮೭-೮೮ರಲ್ಲಿ ಎಷ್ಟು ದೈಹಿಕ ಶಿಕ್ಷಣ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೊಡಲಾಗಿದೆ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೨೧ ಖಾಸಗಿ ದೈಹಿಕ ಶಿಕ್ಷಣ ಕಾಲೇಜುಗಳು ನಡೆಯುತ್ತಿದ್ದು ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜುಗಳು ಯಾವುದೂ ಇಲ್ಲ.

ಆ) ೧೯೮೬-೮೭ರಲ್ಲಿ ಒಂದು ೧೯೮೭-೮೮ರಲ್ಲಿ ಒಂದೂ ಇಲ್ಲ,